ಪ್ರಯಾಣಿಕರು ಎದ್ದು ಕುತೂಹಲದಿಂದ ಕತ್ತಲೆಯ ಮೂಲೆಗೆ ಹೋದರು. ಯಾರೋ ಪುಣ್ಯಾತ್ಮರು ಬ್ಯಾಟರಿ ತಂದು ಬೆಳಕು ಬೀರಿದಾಗ ಕಂಡಿದ್ದೇನೆಂದರೆ ಸಮಸ್ತ ಪ್ರಯಾಣಿಕರ ಅವಿರತ ಮೂತ್ರ ವಿಸರ್ಜನೆಯಿಂದ ಜೌಗು ಪ್ರದೇಶವಾಗಿರುವ ಕೆಸರು ನೆಲದ ಮೇಲೆ ಒಬ್ಬರ ಮೇಲೊಬ್ಬರು ಬಿದ್ದು ಕೂಗಾಡುತ್ತಿರುವ ಎರಡು ಶರೀರಗಳು. ಈ ದೃಶ್ಯ ನೋಡಿ ಗಾಬರಿಗೊಂಡ ಪ್ರಯಾಣಿಕರು ಹೋ ಹೋ ಎಂದು ಗಲಾಟೆ ಎಬ್ಬಿಸಿದರು. ಕೆಸರಿನಲ್ಲಿ ಸ್ನಾನ ಮಾಡಿದ ಶರೀರಗಳು ಮೇಲೆದ್ದು ಈ ಕಡೆಗೆ ನಡೆದು ಬೆಳಕಿಗೆ ಬಂದವು. ಗೆಳೆಯನ ಅನ್ವೇಷಣೆಯಲ್ಲಿ ಹೋದ ವ್ಯಕ್ತಿಯು ತನ್ನ ಗೆಳೆಯನ ದೇಹವನ್ನೇ ಎಡವಿ ಬಿದ್ದನಂತೆ. ಹಾಗಾದರೆ ಮೊದಲನೆಯವನು ಅಲ್ಲಿ ಏನು ಮಾಡುತ್ತಿದ್ದ ಎಂಬ ಪ್ರಶ್ನೆ ಹುಟ್ಟುತ್ತದೆ ಅಲ್ಲವೆ? ನಿದ್ದೆಗಣ್ಣಿನಲ್ಲಿ ಮೂತ್ರ ಮಾಡಲೆಂದು ಹೋಗಿ ಕುಕ್ಕರುಗಾಲಲ್ಲಿ ಕೂತವನಿಗೆ ಅಲ್ಲಿಯೇ ನಿದ್ದೆ ಬಂದು ಉರುಳಿಕೊಂಡನಂತೆ. ಅಯ್ಯಯ್ಯ ಇದೆಂಥಾ ಮೃತ್ಯುರೂಪಿ ನಿದ್ದೆ ಅಂದು ಅಚ್ಚರಿಯಾಗುತ್ತದೆ ಅಲ್ಲವೆ? ಕುಡಿದ ನಶೆಯಲ್ಲಿರುವ ಜನರು ತಮ್ಮ ಸುತ್ತಲಿನ ಜಾಗ ಯಾವುದೆಂದು ಗುರುತು ಹಿಡಿಯದೇ ಚರಂಡಿ ಪಕ್ಕ ಬಿದ್ದಿರುವುದನ್ನು ನೋಡಿರುವ ನಮಗೆ ಕುಡಿಯದಿದ್ದರೂ ನಿದ್ದೆಯ ಅಮಲಿನಲ್ಲಿ ಸ್ಥಳದ ವಿವೇಚನೆಯಿಲ್ಲದೇ ಮಲಗುವವರನ್ನು ನಂಬುವುದು ಕಷ್ಟವಾಗುತ್ತದೆ.

ರಾತ್ರಿ ನಿದ್ದೆಯಲ್ಲಿ ನಡೆಯುವವರು, ಓಡುವವರು, ಆಡುವವರು, ಹಾಡುವವರು ಕೂಡ ಇದ್ದಾರೆ. ಅಂದರೆ ನಿದ್ದೆಗಣ್ಣಿನಲ್ಲಿಯೇ ಅವರು ಈ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ಇದರಿಂದ ಬೇರೆಯವರಿಗೆ ಏನು ತೊಂದರೆ ಎಂದು ಕೇಳಬೇಡಿ. ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ನಮ್ಮ ಗಪ್ಪಣ್ಣ ಇದ್ದಾನೆ. ಒಂದು ರಾತ್ರಿ ನಮ್ಮ ಅಜ್ಜನ ಮೇಲೆ ಕಳೆದ ನಂತರ ಅವನೀಗ ಬೇರೆ ಯಾರಲ್ಲಿಯೂ ಉಳಿಯುವುದಿಲ್ಲವೆಂದು ಉಗ್ರ ಪ್ರತಿಜ್ಞೆ ಮಾಡಿದ್ದಾನೆ. ಎಷ್ಟೇ ದೂರದ ಊರಾದರೂ ಸರಿ ರಾತ್ರಿ ಮಲಗಲು ತನ್ನ ಮನೆಗೇ ಬಂದಿಳಿಯುತ್ತಾನೆ. ಅವನನ್ನು ಇಷ್ಟು ಹೆದರಿಸಿದ ಘಟನೆಯಾದರೂ ಎಂಥದಿರಬಹುದು ಎಂದು ನಿಮಗೆ ಕುತೂಹಲ ಹುಟ್ಟಿತಲ್ಲವೆ? ನಮ್ಮ ಮಾವನ ಮದುವೆ ಸಂದರ್ಭದಲ್ಲಿ ಮನೆ ತುಂಬಾ ನೆಂಟರು. ಶಹರದಿಂದ ಬಂದ ಕುಟುಂಬಕ್ಕೆ ರಾಜಮರ್ಯಾದೆ ಮಾಡಬೇಕೆಂದು ಜಗುಲಿಯ ಮಂಚದ ಮೇಲೆ ಮಲಗಿಸಿ ಉಳಿದವರೆಲ್ಲರನ್ನು ಕೆಳಗೆ ಸಾಲಾಗಿ ಮಲಗಿಸಲಾಯಿತು. ನಡುರಾತ್ರಿ ದೊಪ್ಪನೆ ಮೂಟೆ ಬಿದ್ದ ಸಪ್ಪಳದ ಜೊತೆಗೇ ಅಯ್ಯೋ ಅಮ್ಮಾ ಎಂಬ ಆಕ್ರಂದನ ಕೇಳಿ ಎಲ್ಲರೂ ದಡದಡ ಓಡಿ ಬಂದು ಲೈಟು ಹಚ್ಚಿದರು. ಮಂಚದ ಮೇಲೆ ಮಲಗಿದ ದಢೂತಿ ದೇಹದ ಹುಡುಗ ನಿದ್ದೆಯಲ್ಲಿ ಕೆಳಗೆ ಬಿದ್ದಿದ್ದ. ಅಲ್ಲಿ ಪಾಪದ ಗಪ್ಪಣ್ಣನ ಮುಖದ ಮೇಲೆ ಬಿದ್ದು ಮೂಗು ಜಜ್ಜಿತ್ತು. ಅಯ್ಯೋ ಅವನಿಗೆ ಮಂಚ ಅಭ್ಯಾಸವಿಲ್ಲ ಎನ್ನುತ್ತ ಅವನ ಅಪ್ಪಯ್ಯ ಅವನನ್ನು ನೆಲದ ಮೇಲೆ ಮಲಗಿಸಿ ತಾನು ಮೇಲೆ ಮಲಗಿದರು. ಮತ್ತೆ ಒಂದು ತಾಸು ಉರುಳಿತು. ಎಲ್ಲರಿಗೂ ಒಂದು ಜೊಂಪು ನಿದ್ದೆ ಬಂದಿತ್ತು. ಮತ್ತೆ ಮೂಟೆ ಬಿದ್ದ ಸದ್ದಿನೊಂದಿಗೆ ಕುಯ್ಯೊ ಮರ್ರೊ ಆರ್ತನಾದ. ಈ ಬಾರಿಯ ಕೂಗಿನಲ್ಲಿ ನೋವು ಹೆಪ್ಪುಗಟ್ಟಿ ಧ್ವನಿ ಕ್ಷೀಣವಾಗಿತ್ತು. ಮತ್ತೆ ಲೈಟು ಹಚ್ಚಿ ನೋಡಿದರೆ ಆ ಅಪ್ಪಯ್ಯನೇ ಉರುಳಿ ಬಿದ್ದಿದ್ದ. ಅವನ ಗಾತ್ರ ಮತ್ತು ತೂಕ ಎರಡೂ ಹೆಚ್ಚು ಇದ್ದುದರಿಂದ ಹಾಗೂ ಒಮ್ಮೆ ಬಿದ್ದ ಮುಖದ ಮೇಲೆಯೇ ಎರಡನೇ ಸಲ ಬಿದ್ದಿದ್ದರಿಂದ ಗಪ್ಪಣ್ಣ ತೀವ್ರ ನೋವಿನಾಘಾತದಿಂದ ನರಳುತ್ತಿದ್ದ. ಬಿದ್ದವರು ಮೆತ್ತನೆಯ ಶರೀರದ ಮೇಲೆ ಬಿದ್ದಿದ್ದರಿಂದ ಹೆಚ್ಚಿನ ಪೆಟ್ಟೇನೂ ಆಗುತ್ತಿರಲಿಲ್ಲ. ಡುಬಕ್ಕನೆ ಎದ್ದವರೇ ಮತ್ತೊಂದು ಜಾಗೆಗೆ ಹೋಗಿ ಮಲಗಿಕೊಳ್ಳುತ್ತಿದ್ದರು. ಎರಡನೇ ಸಲ ಅಪ್ಪಯ್ಯ ಬಿದ್ದಾಗ ಅವನ ಹೆಂಡತಿ ಹೊರಗೆ ಬಂದಿದ್ದಳು. ಆಕೆ ಗಂಡನಿಗೆ ಜೋರು ಮಾಡಿದಳು. ಎಂದೂ ಮಂಚದ ಮೇಲೆ ಮಲಗಿ ಅಭ್ಯಾಸ ಇಲ್ಲದ ನೀವೇಕೆ ಮಂಚ ಏರಿದಿರಿ? ಹೋಗಿ ಏಣಿಯ ಹಿಂದಿನ ಸಂದಿಯಲ್ಲಿ ನನ್ನ ಹಸೆಯಿದೆ ಅಲ್ಲಿ ಬಿದ್ದುಕೊಳ್ಳಿ ಎಂದು ಬೈದವಳೇ ತಾನು ಮಂಚವೇರಿ ಮಲಗಿದಳು. ಗಪ್ಪಣ್ಣ ಸಾವಕಾಶವಾಗಿ ಎದ್ದು ಹಿತ್ತಿಲುಕಡೆಯ ಮುರದ ಒಲೆ ಹತ್ತಿರ ಹೋಗಿ ಕೂತ. ಬಚ್ಚಲಿಗೆ ಹೋಗಲು ಬಂದ ಅಜ್ಜಿ ಅಚ್ಚರಿಯಿಂದ

